2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 10/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - ಅನ್ವರ್ ಖಾನ್ | | ಪಿಡಬ್ಲೂ - 03 |
| ತಂದೆಯ ಹೆಸರು | - ಕರೀಂ ಖಾನ್ | | ಸಿಡಬ್ಲೂ - 04 |
| ವಯಸ್ಸು | - 45 ವರ್ಷ | | |
| ಉದ್ಯೋಗ | - ವ್ಯಾಪಾರ | | |
| ವಾಸ ಸ್ಥಳ | - ಬುಕ್ಕಾಂಬುದಿ, ಅಜ್ಜಂಪುರ | | |

ದಿನಾಂಕಃ **10.12.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿ ನನ್ನ ಅಳಿಯ. ಮೃತ ತಬರಕ್ ನನ್ನ ಮಗಳು. ಚಾಸಾ.1 ನನ್ನ ಹೆಂಡತಿ. ಚಾಸಾ.2 ನನ್ನ ಸಂಬಂಧಿ.
2. ಕಳೆದ ಆರು ವರ್ಷಗಳ ಹಿಂದೆ ತಬರಕ್ ಮದುವೆ ಆರೋಪಿಯೊಂದಿಗೆ ಗೌರಾಪುರ ಗ್ರಾಮದಲ್ಲಿ ಗುರುಹಿರಿಯರ ಸಮಕ್ಷಮ ನಮ್ಮ ಸಂಪ್ರದಾಯದಂತೆ ನಡೆಯಿತು.
3. ಮದುವೆಯ ನಂತರ ಮೃತಳು ಹಾಗೂ ಆರೋಪಿ ಬಾಣಾವರದಲ್ಲಿ ವಾಸವಿದ್ದರು. ಅಲ್ಲಿ ಜಗಳವಾದ ಕಾರಣ ಆರೋಪಿ ಹಾಗೂ ಮೃತಳು ಅಜ್ಜಂಪುರದ ಅಮೃತ ಬಡಾವಣೆಗೆ ಬಂದು ನಾವು ಮಾಡಿಕೊಟ್ಟ ಬಾಡಿಗೆ ಮನೆಯಲ್ಲಿ ವಾಸವಿದ್ದರು. ರೂ.ಹದಿನೈದು ಸಾವಿರ ಬಾಡಿಗೆ ಮನೆಗೆ ಮುಂಗಡ ನಾವು ಪಾವತಿಸಿದ್ದೆವು. ಸದರಿ ಬಾಡಿಗೆ ಮನೆ ನಮ್ಮ ಮನೆಯಿಂದ ಎರಡು ಫರ್ಲಾಂಗ್ ದೂರ ಇತ್ತು.
4. ಸದರಿ ಬಾಡಿಗೆ ಮನೆಯಲ್ಲಿ ಆರೋಪಿ ಮತ್ತು ನನ್ನ ಮಗಳು ಚೆನ್ನಾಗಿದ್ದರು. ಆರೋಪಿ ಒಮ್ಮೆ ಮೃತಳಿಗೆ ಆಟೋ ಖರೀದಿಸಲು ರೂ.ಐವತ್ತು ಸಾವಿರ ನಮ್ಮಿಂದ ಪಡೆದು ಕೊಡಿಸುವಂತೆ ಹೇಳುತ್ತಿದ್ದ.

ನಮಗೆ ಐವತ್ತು ಸಾವಿರ ಕೊಡಲು ಸಾಧ್ಯವಿಲ್ಲ ಎಂದು ನಾವು ಇಪ್ಪತ್ತೈದು ಸಾವಿರ ರೂ. ಆರೋಪಿಗೆ ಕೊಡಲು ಹೋಗಿದ್ದೆವು. ಆಗ ಆರೋಪಿ ಇಪ್ಪತ್ತೈದು ಸಾವಿರ ಆಗುವುದಿಲ್ಲ, ಆಟೋ ಖರೀದಿಸಲು ರೂ.ಐವತ್ತು ಸಾವಿರಕೊಡಬೇಕು ಎಂದು ಕೇಳಿದ.

5. ಕಳೆದ ಆರು ವರ್ಷಗಳ ಹಿಂದೆ ಒಂದು ದಿನ ಅಂದರೆ ನನ್ನ ಮಗಳು ಮರಣಹೊಂದಿದ ದಿನ ಆರೋಪಿ ಹಾಗೂ ನನ್ನ ಮಗಳು ನಮ್ಮ ಮನೆಯಲ್ಲಿ ಊಟ ಮಾಡಿ ರಾತ್ರಿ 10.00 ಗಂಟೆಗೆ ಅವರ ಮನೆಗೆ ಹೋದರು. ರಾತ್ರಿ 11.00 ಗಂಟೆ ಸಮಯಕ್ಕೆ ನನ್ನ ಮಗಳು ನನ್ನ ಹೆಂಡತಿಗೆ ಕರೆ ಮಾಡಿದಳು. ನನ್ನ ಮಗಳು ನನ್ನ ಹೆಂಡತಿಗೆ ತಲೆ ದಿಂಬಿನ ಕೆಳಗಡೆ ಇಟ್ಟ ಪೋನು ಆಕಸ್ಮಿಕವಾಗಿ ಕರೆ ಹೋಗಿದೆ ಎಂದು ತಿಳಿಸಿದಳು.

6. ಅದೇ ದಿನ ರಾತ್ರಿ 12.00 ಗಂಟೆಗೆ ಆರೋಪಿ ನನಗೆ ಕರೆ ಮಾಡಿದ. ನನ್ನ ಮಗಳು ಬಿ.ಪಿ. ಲೋ ಆಗಿ ಹೇಗೇಗೋ ವರ್ತಿಸುತ್ತಿದ್ದಾಳೆ ಎಂದು ಹೇಳಿದ. ನಾನು, ಚಾಸಾ.1 ಹಾಗೂ ನನ್ನ ಮಗ ಮಜರ್ ಖಾನ್ ಸೇರಿ ಆರೋಪಿ ಹಾಗೂ ನನ್ನ ಮಗಳು ವಾಸವಿದ್ದ ಮನೆಗೆ ಹೋದೆವು.

7. ಆರೋಪಿಯ ಮನೆಯಲ್ಲಿ ಲೈಟು ಆಫ್ ಆಗಿತ್ತು. ನಾವು ಹೋಗಿ ಲೈಟು ಆನ್ ಮಾಡಿದೆವು. ಆರೋಪಿ ನನ್ನ ಮಗಳನ್ನು ತೊಡೆಯ ಮೇಲೆ ಮಲಗಿಸಿಕೊಂಡಿದ್ದ. ನಾನು ನನ್ನ ಮಾವ ಹಾಗೂ ಅತ್ತೆಗೆ ಕರೆ ಮಾಡಿ ಮೃತಳನ್ನು ಅಜ್ಜಂಪುರ ಸರ್ಕಾರಿ ಆಸ್ಪತ್ರೆಗೆ ಒಯ್ದೆವು.

8. ನರ್ಸು ನನ್ನ ಮಗಳನ್ನು ಪರೀಕ್ಷಿಸಿ ನನ್ನ ಮಗಳು ಮರಣ ಹೊಂದಿದ್ದಾಳೆಂದು ಹೇಳಿದರು. ಗೌರಪುರಕ್ಕೆ ಒಯ್ದು ಅಂತಿಮ ವಿಧಿವಿಧಾನ ನೆರವೇರಿಸಿದೆವು. ಇದಾದ ನಂತರ 15-20 ಗಳ

ನಂತರ ಆರೋಪಿ ಬಾಡಿಗೆ ಮನೆಯ ಮುಂಗಡ ಹಣ ವಾಪಸ್ಸು ಪಡೆದುಕೊಂಡು ಹೋಗಿದ್ದ.

9. ನಾವು ಆರೋಪಿಗೆ ಬಾಡಿಗೆ ಮನೆ ಮುಂಗಡ ಹಣ ಏಕೆ ವಾಪಸ್ಸು ಪಡೆದುಕೊಂಡೆ ಎಂದು ಕೇಳಿದಾಗ ಆರೋಪಿ ನನ್ನ ಮಗಳನ್ನು ತನ್ನ ತಮ್ಮನೊಂದಿಗೆ ಸೇರಿ ಹೊಡೆದು ನೇಣುಹಾಕಿ ಸಾಯಿಸಿ ರುವುದಾಗಿ ಒಪ್ಪಿಕೊಂಡಿರುತ್ತಾನೆ. ಈ ವಿಚಾರ ತಿಳಿದು ನನ್ನ ಹೆಂಡತಿ ಪೋಲೀಸರಲ್ಲಿ ದೂರು ಸಲ್ಲಿಸಿದ್ದಾರೆ.

10. ನನ್ನ ಹೆಂಡತಿ ದೂರು ಸಲ್ಲಿಸಿದ ನಂತರ ಪೋಲಿಸರು ನನ್ನ ಶವವನ್ನು ಗೋರಿಯಿಂದ ತೆಗೆಸಿದರು. ನನ್ನ ಮಗಳ ಶವ ಪರೀಕ್ಷೆ ನಡೆಸಿದರು. ಶವ ಹೂತ ಜಾಗವನ್ನು ಪೋಲೀಸರಿಗೆ ನಾನು ತೋರಿಸಿರುತ್ತೇನೆ. ಶವ ಹೊರತೆಗೆಯುವಾಗ ಪೋಲೀಸರು, ಸ್ಥಳೀಯ ಸಹಾಯ ಆಯುಕ್ತಕರು ಹಾಗೂ ವೈಧ್ಯರು ಹಾಜರಿದ್ದರು.

11. ಶವ ಹೊರತೆಗೆಯುವ ಸಮಯದಲ್ಲಿ ಸಂಗ್ರಹಿಸಿದ ಭಾವಚಿತ್ರಗಳನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.7 ಮತ್ತು 11 ಎಂದು ಈಗಾಗಲೇ ಗುರುತಿಸಲಾಗಿದೆ.

12. ಕಬರಸ್ಥಾನದಲ್ಲಿ ಶವ ಹೊರತೆಗೆದಾಗ ಪೋಲೀಸರು ತಯಾರಿಸಿದ ಮಹಜರಿಗೆ ನಾನು ಸಹಿ ಮಾಡಿದ್ದು ಅದನ್ನು ನಿಪಿ.12 ಎಂದು ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು.

13. ಶವ ಹೊರತೆಗೆದ ಸಮಯದಲ್ಲಿ ತರೀಕೆರೆ ಎ.ಸಿ. ನನ್ನನ್ನು ವಿಚಾರಿಸಿದ್ದಾರೆ. ತರೀಕೆರೆ ನ್ಯಾಯಾಲಯದಲ್ಲಿ ನನ್ನನ್ನು ವಿಚಾರಿಸಿದಾಗ ನಾನು ಹೇಳಿಕೆ ನೀಡಿದ್ದೇನೆ. ನಾನು ತರೀಕೆರೆ ನ್ಯಾಯಾಲಯದಲ್ಲಿ ನೀಡಿದ ಹೇಳಿಕೆಯನ್ನು ಈಗ

ನೋಡುತ್ತಿದ್ದು ಅದನ್ನು ನಿಪಿ.13 ಎಂದು ಸಾಕ್ಷಿಯ ಸಹಿಯನ್ನು ನಿಪಿ.13(ಎ) ಎಂದು ಗುರುತಿಸಲಾಯಿತು. ಬೇರೆ ಯಾರು ನನ್ನನ್ನು ವಿಚಾರಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

14. ಪೋಲೀಸರು ಕೂಡ ನನ್ನನ್ನು ದಿಃ 18.10.2019 ರಂದು ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದಾರೆ ಎಂದರೆ ನನಗೀಗ ನೆನಪಿಲ್ಲ. ನಾನು ಪೋಲೀಸರಲ್ಲಿ ಘಟನೆಯ ಕುರಿತು ಹೇಳಿಕೆ ನೀಡಿದ್ದೇನೆ ಎಂದರೆ ನಿಜ.

<u>ಪಾಟೀ ಸವಾಲು: ಶ್ರೀ ಕೆ.ಎನ್.ಸಿ., ವಕೀಲರಿಂದ ಆರೋಪಿ ಪರವಾಗಿಃ</u>

15. ಮೃತಳು ಹಾಗೂ ಆರೋಪಿಗೆ ಬಾಡಿಗೆ ಮನೆ ಕೊಡಿಸಿದ ಬಗ್ಗೆ ಯಾವುದೇ ಕರಾರು ಆಗಿರುವುದಿಲ್ಲ. ನನ್ನ ಮೃತ ಮಗಳು ಮತ್ತು ಆರೋಪಿಗೆ ಒಂದು ಹೆಣ್ಣು ಮಗು ಇದೆ. ನನ್ನ ಮಗಳು ಮರಣಹೊಂದಿದ ನಂತರ ಆರೋಪಿ ನನ್ನ ಮಗಳ ಮಗುವನು ನಮ್ಮೊಂದಿಗೆ ಇದ್ದವಳನ್ನು ಕರೆದುಕೊಂಡು ಹೋಗಲು ಬಂದಿದ್ದ ಎಂದರೆ ಸರಿಯಲ್ಲ.

16. ಆರೋಪಿ ನಮಗೆ ದೂರವಾಣಿ ಕರೆ ಮಾಡಿದ ನಂತರ ನಾವು ಆರೋಪಿ ಹಾಗೂ ಮೃತಳು ವಾಸವಿದ್ದ ಮನೆಗೆ ಹೋಗಿ ನನ್ನ ಮಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಸಮಯದಲ್ಲಿ ಅವರ ಮೈಮೇಲೆ ಗಾಯ ಇರಲಿಲ್ಲ. ನನ್ನ ಮಗಳು ಬಿ.ಪಿ. ಲೋ ಆದ ಕಾರಣ ಮೃತಪಟ್ಟಿದ್ದಾಳೆಂದು ತಿಳಿದು ನಾವು ಮೃತದೇಹ

ವನ್ನು ಮಣ್ಣು ಮಾಡಿದ್ದೆವು ಎಂದರೆ ಸಾಕ್ಷಿಯು ನಾವು ಹಾಗೆ ತಿಳಿದು ಮೃತದೇಹವನ್ನು ಮಣ್ಣು ಮಾಡಿದ್ದೆವು ಆದರೆ ಆರೋಪಿ ಹೇಳಿದ ನಂತರ ನಮಗೆ ನಿಜ ಸಂಗತಿ ತಿಳಿಯಿತು ಎನ್ನುತ್ತಾರೆ.

17. ಬಾಣಾವರದಲ್ಲಿ ಆರೋಪಿ ಹಾಗೂ ಮೃತಳ ಮದ್ಯೆ ಗಲಾಟೆ ನಡೆದಾಗ ಯಾವುದೇ ದೂರು ದಾಖಲಿಸಿರುವುದಿಲ್ಲ. ನನ್ನ ಮಗಳು ಮೃತಪಡುವ ದಿನ ಆರೋಪಿ, ನನ್ನ ಮಗಳು ಹಾಗೂ ಅವರ ಮಗು ನಮ್ಮ ಮನೆಯಲ್ಲಿ ಊಟ ಮುಗಿಸಿ ಸಂತೋಷವಾಗಿಯೇ ಹೊರಟುಹೋಗಿದ್ದರು.

18. ಆರೋಪಿ ಆಟೋ ಖರೀದಿಸಲು ರೂ. ಐವತ್ತು ಸಾವಿರ ಕೇಳಿದ ಬಗ್ಗೆ ನನ್ನ ಮಗಳು ಜೀವಂತ ಇದ್ದಾಗ ನಾವು ಯಾವುದೇ ದೂರು ದಾಖಲಿಸಿರುವುದಿಲ್ಲ. ಆರೋಪಿ ಎಂದೂ ಆಟೋ ಖರೀದಿಸಲು ನಮ್ಮ ಬಳಿ ರೂ. ಐವತ್ತು ಸಾವಿರಕ್ಕೆ ಬೇಡಿಕೆ ಇಟ್ಟಿರಲಿಲ್ಲ ಎಂದರೆ ಸರಿಯಲ್ಲ.

19. ನಾನು ಓದಿದವನಲ್ಲ. ನಿಪಿ.12 ಮತ್ತು 13 ರ ದಾಖಲೆಗಳಲ್ಲಿ ಬರೆದ ವಿಚಾರ ಗೊತ್ತಿಲ್ಲ. ನ್ಯಾಯಾಧೀಶರ ಮುಂದೆ ನನಗೆ ಹೇಳಿಕೆ ನೀಡಲು ಪೋಲೀಸರು ಹೇಳಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪೋಲೀಸರು ನನ್ನ ಹೇಳಿಕೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

20. ಕಬರಸ್ತಾನದಲ್ಲಿ ಸಾಕಷ್ಟು ಹೆಣಗಳನ್ನು ಹೂತಿರುತ್ತಾರೆ ಎಂದರೆ ನಿಜ. ನಿಪಿ.7 ಭಾವಚಿತ್ರದಲ್ಲಿ ಬೇರೆ ಶವ ಹೂತಿರುವುದು ಕಾಣುವುದಿಲ್ಲ ಎಂದರೆ ಸರಿಯಲ್ಲ. ಶವ ಹೊರ ತೆಗೆದ ದಿನಕ್ಕೆ ಶವ ಹೂತು ಸುಮಾರು 15-20 ದಿನಗಳಾಗಿತ್ತು.

21. ಆರೋಪಿ ತನ್ನ ಮಗುವಿನ ಸುಪರ್ದಿಗೆ ವಹಿಸುವಂತೆ ನಮ್ಮನ್ನು ಕೇಳಿದ ಕಾರಣಕ್ಕೆ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

22. ನಾನು ಹೇಳುವಂತೆ ಆರೋಪಿ ನಮ್ಮ ಬಳಿ ತನ್ನ ತಮ್ಮನೊಂದಿಗೆ ಸೇರಿ ನನ್ನ ಮಗಳಿಗೆ ನೇಣು ಹಾಕಿ ಸಾಯಿಸಿರುವುದಾಗಿ ಹೇಳಿಕೊಂಡಿರುವುದಿಲ್ಲ ಎಂದರ ಸರಿಯಲ್ಲ. ಆರೋಪಿ ಹಾಗೆ ಹೇಳಿದ್ದಾನೆಂದು ಈ ಪ್ರಕರಣಕ್ಕಾಗಿ ಕಲ್ಪಿತ ಕಥೆ ಹೆಣೆಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ